ರಾಯಚೂರು	5158	1031
ಬೀದರ್	5892	1073

ಶಿಕ್ಷಕರ ಕೊರತೆ ಇರುವುದನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಿ ಸರಿಪಡಿಸಲಾಗುವುದು.

ರಾಜ್ಯದಲ್ಲಿ ಉದ್ಯೋಗ ಭರವಸೆಯ ಯೋಜನೆ.

165(212)

ಶ್ರೀ ಚನ್ನಿಗಪ್ಪ ಸಿ.(ಕೊರಟಗೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಉದ್ಯೋಗ ಭರವಸೆ ಯೋಜನೆಯ ಪಟ್ಟಿ ತಯಾರಿಸುವ ಬಗ್ಗೆ ಸರ್ಕಾರವು ತಾಲ್ಲೂಕು ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದೆಯೆ;

ಆ. ಈ ಕಾರ್ಯಕ್ರಮದಡಿಯಲ್ಲಿ ಸರ್ಕಾರ ಎಷ್ಟು ಹಣ ನಿಗದಿ ಮಾಡಿದೆ ಹಾಗೂ ಯಾವ ಮಾರ್ಗದರ್ಶನದ ಮೇಲೆ ಈ ಹಣ ವಿತರಣೆ ಮಾಡಲಾಗುವುದು;

ಇ. ಈ ಯೋಜನೆಯಡಿ ಅನುದಾನ ಕಾಮಗಾರಿಗಳಿಗೆ, ಇತ್ಯಾದಿ ವಿಚಾರಗಳಿಗೆ ವಿಧಾನಸಭಾ ಸದಸ್ಯರಿಗೆ ಸರ್ಕಾರವು ಯಾವ ಜವಾಬ್ದಾರಿಯನ್ನು ವಹಿಸಿಕೊಟ್ಟಿರುತ್ತದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):

ಅ. ಪರಿಷ್ಕೃತ ಮಾರ್ಗಸೂಚಿಯಂತೆ ತಾಲ್ಲೂಕು ಪಂಚಾಯತ್‌ಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ. (ಅನುಬಂಧ-ಎ)

ಆ. 2000-2001ನೇ ಸಾಲಿನ ಅನುದಾನದ ಹಣ ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ಕೇಂದ್ರ	ರಾಜ್ಯ	ಒಟ್ಟು
4596.00	1532.00	6128.00

ಉದ್ಯೋಗ ಭರವಸೆ ಯೋಜನೆಯ ಮಾರ್ಗಸೂಚಿಯ ಕಂಡಿಕೆ 2.4ರನ್ವಯ ಕೇಂದ್ರ ಸರ್ಕಾರವು ಜಿಲ್ಲಾವಾರು ಅನುದಾನ ಹಂಚಿಕೆ ಮಾಡುತ್ತದೆ. ಪರಿಗಣಿಸುವ ಮಾನದಂಡಗಳು ಯಾವುದೆಂದರೆ:

ಅ) ಜಿಲ್ಲೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಸಂಖ್ಯೆ

ಆ) ಜಿಲ್ಲೆ ಪ್ರತಿ ಕೃಷಿ ಕಾರ್ಮಿಕರ ಕೃಷಿ ಉತ್ಪನ್ನದ ಸರಾಸರಿ ಫಸಲು.

ಇ) ಜಿಲ್ಲೆಯ ಗ್ರಾಮೀಣ ಜನಸಂಖ್ಯೆ

ಇ. ವಿಧಾನಸಭಾ ಸದಸ್ಯರನ್ನು ಜಿಲ್ಲಾ ಹಾಗೂ ತಾಲ್ಲೂಕು ಉದ್ಯೋಗ ಭರವಸೆ ಯೋಜನೆ ಸಮತಿಯ ಸದಸ್ಯರನ್ನಾಗಿ ಮಾಡಲಾಗಿದೆ.

ಅನುಬಂಧ-ಎ

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿಪಿ. 108 ಇಎಎಸ್ 2000 ನಿರ್ದೇಶಕರ ಕಛೇರಿ
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ
ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
3ನೇ ಹಂತ, 7ನೇ ಮಹಡಿ, ಬಹುಮಹಡಿ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ 20.1.2001.

ಸುತ್ತೋಲೆ

ವಿಷಯ: ಉದ್ಯೋಗ ಭರವಸೆ ಯೋಜನೆಯ ಮಾರ್ಗ ಸೂಚಿಯನ್ವಯ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಉದ್ಯೋಗ ಭರವಸೆ ಯೋಜನಾ ಸಮಿತಿಯ ಕಾರ್ಯವಿಧಾನದ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶದ ಸಂಖ್ಯೆ: ಆರ್‌ಡಿಪಿ 19 ಇಎಎಸ್ 95 ಬೆಂಗಳೂರು ದಿನಾಂಕ 30.11.95

2) ಸರ್ಕಾರದ ಆದೇಶದ ಸಂಖ್ಯೆ: ಆರ್‌ಡಿಪಿ 27 ಇಎಎಸ್ 95 ದಿನಾಂಕ.5.2.99

ಉದ್ಯೋಗ ಭರವಸೆ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯನ್ವಯ ಶೇಕಡ 70ರಷ್ಟು ಅನುದಾನಕ್ಕೆ ತಾಲ್ಲೂಕು ಪಂಚಾಯತ್‌ನಿಂದಲೂ, ಶೇಕಡ 30 ರಷ್ಟು ಅನುದಾನಕ್ಕೆ ಜಿಲ್ಲಾ ಪಂಚಾಯಿತ್‌ನಿಂದಲೂ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ. ಉಲ್ಲೇಖ(1)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಉದ್ಯೋಗ ಭರವಸೆ ಯೋಜನೆಯಡಿ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಗಳನ್ನು ರಚಿಸಿ ಅವುಗಳ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಲಾಗಿರುತ್ತದೆ. ಹಾಗೂ ಉಲ್ಲೇಖ(2)ರ ಆದೇಶದಲ್ಲಿ ಹೆಚ್ಚುವರಿ ಮಾರ್ಗಸೂಚಿಯನ್ನು ಹೊರಡಿಸಿ ಹಿಂದೆ ರಚಿಸಲಾಗಿರುವ ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಗಳನ್ನು ಮುಂದುವರಿಸಲು ಆದೇಶ ನೀಡಲಾಗಿರುತ್ತದೆ.

ಉದ್ಯೋಗ ಭರವಸೆ ಯೋಜನೆಯಡಿ ಶೇಕಡ 70 ಹಾಗೂ ಶೇಕಡ 30 ರ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಕೈಗೆತ್ತಿಕೊಳ್ಳಲಾಗುವ ಕಾಮಗಾರಿಗಳ ಪಟ್ಟಿಯನ್ನು ತಾಲ್ಲೂಕು ಪಂಚಾಯತಿ ಸಮಿತಿಯ ಕಾಮಗಾರಿಗಳ ಪಟ್ಟಿಯನ್ನು ತಾಲ್ಲೂಕು ಪಂಚಾಯತಿ ಸಮಿತಿಯು ಅನುಮೋದನೆ ನೀಡಬೇಕೇ ಅಥವಾ ತಾಲ್ಲೂಕು ಪಂಚಾಯತಿ ಉದ್ಯೋಗ ಭರವಸೆ ಯೋಜನೆ ಸಮಿತಿಯು ಅನುಮೋದನೆ ನೀಡಬೇಕೇ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಬಹಳಷ್ಟು ಜಿಲ್ಲಾ ಪಂಚಾಯತಿಗಳವರು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ದಿನಾಂಕ 1.4.99ರಿಂದ ಜಾರಿಗೆ ಬಂದಿರುವ ಪರಿಷ್ಕೃತ ಮಾರ್ಗಸೂಚಿಯನ್ವಯ ಹಾಗೂ ಉಲ್ಲೇಖದಲ್ಲಿ ನಮೂದಿಸಿರುವ ಸರ್ಕಾರದ ಆದೇಶಗಳನ್ವಯ ಶೇಕಡ 70ರಷ್ಟು ಅನುದಾನಕ್ಕೆ ತಾಲ್ಲೂಕುಮಟ್ಟದಲ್ಲಿ ತಾಲ್ಲೂಕು ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಗಳು ಶಿಫಾರಸ್ಸು ಮಾಡಿರುವ ಕಾಮಗಾರಿಗಳನ್ನು ತಾಲ್ಲೂಕು ಪಂಚಾಯಿತಿಯು ಹಾಗೂ ಶೇಕಡ 30 ರಷ್ಟು ಅನುದಾನಕ್ಕೆ ಜಿಲ್ಲಾಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಯು ಶಿಫಾರಸ್ಸು ಮಾಡಿರುವ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿಯು ಅನುಮೋದನೆ ನೀಡಬೇಕು ಎಂಬುದಾಗಿ ಸ್ಪಷ್ಟೀಕರಣ ನೀಡಲಾಗಿದೆ. ಈ ಸ್ಪಷ್ಟೀಕರಣವು ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಉಪ ಕಾರ್ಯದರ್ಶಿ,
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.